ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 13th July, 1981 Ashada 22, 1903 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI K.H. RANGANATH) in the Chair]

STARRED QUESTIONS
(to which oral Answers were given)

Vacant Quarters of Horticulture Department in Moka of Bellary Taluk

45 SRI M. RAMAPPA (Kurugodu).—Will the Minister of State for Horticulture and Prisons be pleased to state.—

(a) whether it has come to the notice of the Government that building with quarters for officials of Horticulture Departments is vacant since a very long time in Moka of Bellary Taluk;

(b) whether there is any request either from the local people or from the Education Department to handover the above building to the Education Department to run the proposed High School;

(c) action taken by Government so for to transfer the building and the progress made by Government in this regard ?

SRI K. YENKATAPPA (Minister of state for Horticulture and Prisons).—

(a) Yes.

(b) Yes.

(c) Proposal closing down the farm at Moka has been received from the Director of Horticulture and is under consideration of Government. After a decision is taken in the matter, the question of transferring the land with the building to Education Department will be coasidered.

ಶ್ರೀ ಎಂ. ರಾಮಪ್ಪ.—ಸ್ವಾಮಿ, ತಾವು ಎಷ್ಟು ದಿನದಲ್ಲಿ ಪರಿಶೀಲನೆ ಮಾಡಿ, ಯಾರಿಗೆ ಕೊಡುತ್ತೀರಿ ?

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಬೇಡಿಕೆ ಮೇಲೆ ಪರಿಶೀಲಿಸುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ವಿದ್ಯಾ ಇಲಾಖೆಯಿಂದ ಬೇಡಿಕೆ ಬಂದಿಲ್ಲವೇ ?

ಶ್ರೀ ಕೆ. ಯಂಕಟಪ್ಪ.—ಇಲ್ಲಿಯವರೆಗೆ ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ವಿದ್ಯಾ ಇಲಾಖೆಯಿಂದ ಬೇಡಿಕೆ ಬಂದರೆ ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಪರಿಶೀಲಿಸುತ್ತೇವೆ.

Varahi Irrigation Project.

144 SRI ANANDA KUNDA HEGDG (Brahmavar), —Will the Minister of State for Major and Medium Irrigation be pleased to state.—

(a) the stage at which the Varahi Irrigation Scheme stands;

(b) whether it is a fact that original estimates are being reconsidered on Varahi Irrigation Scheme ?

SRI B. B. CHIMMANAKATTI (Minister of State for Major and Medium Irrigation),—

(a) The varahi Irrigation Project has been sanctioned and its preliminary works are under progress.

(b) Yes.

ಶ್ರೀ ಆನಂದ ಕುಂದ ಹೆಗಡೆ.—ಮಾನ್ಯ ಅಧ್ಯಕ್ಷರೇ, ವರಾಹಿ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಎರಡು ಅಂದಾಜುಗಳು ಇವೆ. ಒಂದು ಹತ್ತೊಂಬತ್ತು ಕೋಟಿ ರೂಪಾಯಿ, ಇನ್ನೊಂದು ಏಳು ಕೋಟಿ ರೂಪಾಯಿ, ಇದರಲ್ಲಿ ಸರ್ಕಾರ ಯಾವುದನ್ನು ಸ್ವೀಕರಿಸಿದೆ? ಮತ್ತು ಯಾವ ಹಂತದಲ್ಲಿದೆ? ಈ ಯೋಜನೆಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯಲಾಗಿದೆಯೆ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಮಾನ್ಯ ಅಧ್ಯಕ್ಷರೇ, ವರಾಹಿ ಯೋಜನೆಗೆ ಸಂಬಂಧಪಟ್ಟಂತೆ ೧೯೭೯ ರಲ್ಲಿ ೯೫೩ ಲಕ್ಷ ರೂಪಾಯಿಗಳ ಅಂದಾಜನ್ನು ಸ್ಯಾಂಕ್ಷನ್ ಮಾಡಲಾಗಿತ್ತು. ಮಂಜೂರು ಮಾಡಿ ಮಾರ್ಚ್ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಆದೇಶ ಕೊಟ್ಟಿತ್ತು. ತದನಂತರ ಈ ಯೋಜನೆಯಿಂದ ಕೇವಲ ನೀರಾವರಿ ಸೌಲಭ್ಯವನ್ನು ಮಾತ್ರವಲ್ಲದೆ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದು ಸೂಕ್ತವೆಂದು ಕಂಡುಬಂದಿದ್ದರಿಂದ, ವಿದ್ಯುಚ್ಛಕ್ತಿ ಮಂಡಲಿಯವರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರಿಂದ ಈ ಯೋಜನೆಯನ್ನು ಮಲ್ಟಿಪರ್ಪಸ್ ಯೋಜನೆಯಾಗಿ ಮಾಡಬೇಕೆಂದು ವಿವರವಾದ ಸರ್ವೆ ಮಾಡಿಸುತ್ತಿದ್ದೇವೆ. ಸರ್ವೆ ಮಾಡಿದ ನಂತರ ಪೂರ್ತಿಯಾಗಿ ವಿವರಗಳನ್ನು ತಿಳಿಸಲು ಸಾಧ್ಯ.

ಶ್ರೀ ಆನಂದಕುಂದ ಹೆಗಡೆ.—ವಿದ್ಯುಚ್ಛಕ್ತಿ ಯೋಜನೆಗೆ ಸಂಬಂಧಪಟ್ಟಿದ್ದು ಏವಮೊಗ್ಗದಲ್ಲಿದೆ. ಇದಕ್ಕೆ ಸಂಬಂಧಪಟ್ಟಂತೆ ಪೈನಲ್ ವರ್ಕಿಂಗ್ ಎಸ್ಟಿಮೇಟ್ ಅಂದಾಜು ಇದೆ. ನಾನು ಕೆಳಗಿನ ಯೋಜನೆಗೆ ಸಂಬಂಧಪಟ್ಟಂತೆ ಮಾತ್ರ ಕೇಳಿಸುತ್ತಿದ್ದೇನೆ. ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬೇಕಾಗಿದೆ.

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಹೈಡ್ರೋ ಎಲೆಕ್ಟ್ರಿಕ್ ಯೋಜನೆ ಏನಿದೆ ಅದು ೧೨ ತಾಸು ಜನರೇಟರ್ ಮಾಡತಕ್ಕ ಉದ್ದೇಶ ಇತ್ತು. ತದನಂತರ ಪೀಕಿಂಗ್ ಸ್ಟೇಷನ್ ಬೆಳಿಗ್ಗೆ ಮೂರು ತಾಸು, ಸಾಯಂಕಾಲ ಮೂರು ತಾಸು ನೀರನ್ನು ಉಪಯೋಗಿಸಿ ಹೈಡ್ರೋ ಜನರೇಟರ್ ಕೆಲಸ ಮಾಡಬಹುದು